ಮಲಯಾಳಂ ಕಾವ್ಯಮಂಜರಿ



# ಬಿಂದು ಕೃಷ್ಣನ್
## ಪದ್ಯಗಳು



# ಅಲಂಕಾರಗಳು

ಸ್ತ್ರೀಯರ ಅಲಂಕಾರಗಳು
ನೀವು ಅಂದುಕೊಂಡಿರುವ ಹಾಗೆ
ಅಷ್ಟು ಸರಳವಲ್ಲ
ಅವು ರೂಪಕಗಳಾಗಿವೆ
ಬಹಳಷ್ಟು ಧ್ವನಿಗಳನ್ನೂ
ಅಂತರಾರ್ಥಗಳನ್ನೂ ಹೊಂದಿವೆ

ನೋಡಿ,
ನಾನು ದಿನವೂ
ಕಣ್ಣಿಗೆ ಕಾಡಿಗೆ ತೀಡುವುದಿಲ್ಲ
ಆಸಕ್ತಿಯಿಲ್ಲ, ಸಮಯವೂ ಇಲ್ಲ
ಆದರೆ, ಕೆಲವೊಂದು ದಿವಸಗಳಲ್ಲಿ
ಸಮಯ ತೆಗೆದುಕೊಂಡು
ಕಣ್ಣಿಗೆ ಕಾಡಿಗೆ ತೀಡುತ್ತೇನೆ
'ಮಸ್ಕಾರ' ಹಚ್ಚುತ್ತೇನೆ
ಹಾಗಿದ್ದಲ್ಲಿ ಹಿಂದಿನ ರಾತ್ರಿ
ಅಥವಾ ಬೆಳಿಗ್ಗೆ
ಸಾಕಷ್ಟು ಅತ್ತಿದ್ದೇನೆ ಎಂದೇ ಅರ್ಥ

ಕಾಡಿಗೆ ಒಂದು ಮುಚ್ಚುಮರೆಯಷ್ಟೇ
ತನ್ನ ಪತನಗಳು
ಸಮಾಜಕ್ಕೆ ತಿಳಿಯಬಾರದೆಂದು ಭಾವಿಸುವ
ಸ್ತ್ರೀಯೊಬ್ಬಳ ಮುಚ್ಚುಮರೆ;
ಕೆಲ ಆಧುನಿಕ
ಉತ್ತರಭಾರತೀಯ ಮಹಿಳೆಯರ
ಕೂಲಿಂಗ್ ಗ್ಲಾಸಿನ ಹಿನ್ನಲೆಯಲ್ಲೂ
ಇದೇ ಕಥೆ ಆಗಿರಬಹುದುದೆಂದು
ನನಗೆ ಅನ್ನಿಸಿದ್ದಿದೆ
ನಾನು ಸಾಮಾನ್ಯವಾಗಿ
ಬೈತಲೆಯಲ್ಲಿ ತಿಲಕ ಇಡುವುದಿಲ್ಲ.
ಆದರೆ, ಕೆಲ ಪುರುಷ ಸಭಾಂಗಣಗಳಲ್ಲಿ
ಅದು ಸಹಾಯಕವಾಗುತ್ತದೆ
'ಟ್ಚೈ ಮಾಡದಿರು
ಇವಳು ಪತಿವ್ರತೆ' ಎನ್ನುವ
ಒಂದು ಅಪಾಯದ ಸೂಚನೆ